| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 56 ]
Total No. of Questions : 56 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24
[ Total No. of Printed Pages : 24

**ಸಂಕೇತ ಸಂಖ್ಯೆ : 85-K**
**Code No. : 85-K**

# ವಿಷಯ : ಸಮಾಜ ವಿಜ್ಞಾನ
# Subject : SOCIAL SCIENCE

(ಕನ್ನಡ ಭಾಷಾಂತರ)
( Kannada Version )

ದಿನಾಂಕ : 24. 06. 2013 ]
ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ]
ಪರಮಾವಧಿ ಅಂಕಗಳು : 100 ]

[ Date : 24. 06. 2013
[ Time : 9-30 A.M. to 12-45 P.M
[ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 13. | | 25. | | 37. | | 49. | |
| 2. | | 14. | | 26. | | 38. | | 50. | |
| 3. | | 15. | | 27. | | 39. | | 51. | |
| 4. | | 16. | | 28. | | 40. | | 52. | |
| 5. | | 17. | | 29. | | 41. | | 53. | |
| 6. | | 18. | | 30. | | 42. | | 54. | |
| 7. | | 19. | | 31. | | 43. | | 55. | |
| 8. | | 20. | | 32. | | 44. | | 56. | |
| 9. | | 21. | | 33. | | 45. | | × | |
| 10. | | 22. | | 34. | | 46. | | × | |
| 11. | | 23. | | 35. | | 47. | | × | |
| 12. | | 24. | | 36. | | 48. | | × | |
| | | | | | | | | ***Total Marks*** | |

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 56 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. 1761 ರಲ್ಲಿ ಕೌಂಟ್-ಡಿ-ಲಾಲಿಯು ಬ್ರಿಟಿಷರಿಗೆ ಶರಣಾದ ಸ್ಥಳ

(A) ಮದ್ರಾಸ್

(B) ಪಾಂಡಿಚೇರಿ

(C) ಬಾಂಬೆ

(D) ಕಲ್ಕತ್ತ

*ಉತ್ತರ :* ________________________________

2. ಭಾರತದಲ್ಲಿ ಹೆಣ್ಣು ಮಕ್ಕಳಿಗಾಗಿ ಪ್ರಪ್ರಥಮ ಪ್ರೌಢಶಾಲೆಯನ್ನು ಪ್ರಾರಂಭಿಸಿದವರು

(A) ಜಸ್ಟೀಸ್ ರಾನಡೆ

(B) ಡಾ॥ ಆತ್ಮಾರಾಂ ಪಾಂಡುರಂಗ

(C) ಜ್ಯೋತಿಬಾ ಫುಲೆ

(D) ದೊಂಡೋ ಕೇಶವ ಕರ್ವೆ

*ಉತ್ತರ :* ______________________

3. ಈ ಕೆಳಗಿನ ಸಾಧನೆಗಳಲ್ಲಿ ವಿಶ್ವೇಶ್ವರಯ್ಯನವರ ಸಾಧನೆಗೆ ಸೇರದುದು

(A) ಭದ್ರಾವತಿ ಕಬ್ಬಿಣದ ಕಾರ್ಖಾನೆ

(B) ಹೆಬ್ಬಾಳದ ಕೃಷಿ ಶಾಲೆ

(C) ಬೆಂಗಳೂರಿನ ಸರ್ಕಾರಿ ಸಾಬೂನು ಕಾರ್ಖಾನೆ

(D) ಭದ್ರಾವತಿಯ ಸಿಮೆಂಟ್ ಮತ್ತು ಕಾಗದದ ಕಾರ್ಖಾನೆ

*ಉತ್ತರ :* ______________________

4. ಯಾರು ಮೈಸೂರಿನ ಜವಾಬ್ದಾರಿ ಸರ್ಕಾರದ ಮೊಟ್ಟಮೊದಲ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು ?

(A) ಕೆ.ಟಿ. ಭಾಷ್ಯಂ

(B) ಕೆ.ಸಿ. ರೆಡ್ಡಿ

(C) ಟಿ. ಸಿದ್ದಲಿಂಗಯ್ಯ

(D) ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್

*ಉತ್ತರ :* ______________________

5. ಈ ಕೆಳಗಿನವರಲ್ಲಿ ಅಲಿಪ್ತ ಚಳುವಳಿಯ ನಾಯಕರು

(A) ನೆಹರು

(B) ಮಾವೋ ತ್ಸೆ-ತುಂಗ್

(C) ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್

(D) ಸ್ಟಾಲಿನ್

*ಉತ್ತರ :* ____________________

6. ರಷ್ಯಾದಲ್ಲಿ ಝಾರ್‌ಗಳ ಆಡಳಿತ ಅಂತ್ಯಗೊಂಡದ್ದು ಏಕೆಂದರೆ

(A) ಆಳ್ವಿಕೆ ದಮನಕಾರಿ ಮತ್ತು ಕ್ರೂರ ರೀತಿ

(B) ರಷ್ಯಾವು ಜಪಾನಿನಿಂದ ಸೋಲಲ್ಪಟ್ಟಿತು

(C) ದೊಡ್ಡ ಜಮೀನುದಾರರು ರೈತರನ್ನು ಶೋಷಣೆಗೆ ಒಳಪಡಿಸಿದ್ದರು

(D) ಕಮ್ಯುನಿಸ್ಟರು ಕ್ರಾಂತಿಕಾರಿ ಸಮಿತಿಗಳನ್ನು ಸ್ಥಾಪಿಸಿದರು

*ಉತ್ತರ :* ____________________

7. ಶಿಕ್ಷಣವು ಮೂಲಭೂತ ಹಕ್ಕು ಎಂದು ತಿಳಿಸಿದ ಸಂವಿಧಾನದ ತಿದ್ದುಪಡಿ

(A) 42ನೆಯ

(B) 93ನೆಯ

(C) 73ನೆಯ

(D) 74ನೆಯ

*ಉತ್ತರ :* ____________________

8. ಮಿತ ಅಣ್ವಸ್ತ್ರ ಪರೀಕ್ಷಾ ನಿರ್ಬಂಧದ ಒಪ್ಪಂದಕ್ಕೆ ಒಳಪಟ್ಟ ರಾಷ್ಟ್ರಗಳು

(A) ಅಮೆರಿಕ, ರಷ್ಯಾ ಹಾಗೂ ಇಂಗ್ಲೆಂಡ್

(B) ಅಮೆರಿಕ, ರಷ್ಯಾ ಹಾಗೂ ಇಟಲಿ

(C) ಅಮೆರಿಕ, ರಷ್ಯಾ ಹಾಗೂ ಜರ್ಮನಿ

(D) ಅಮೆರಿಕ, ರಷ್ಯಾ ಹಾಗೂ ಜಪಾನ್

*ಉತ್ತರ :* ______________________________

9. ಸೌರಾಷ್ಟ್ರದ ಗಿರ್ ಕಾಡುಗಳಲ್ಲಿ ಸ್ವಾಭಾವಿಕವಾಗಿ ಕಂಡುಬರುವ ಪ್ರಾಣಿ

(A) ಐಬೆಕ್ಸ್

(B) ಹುಲಿ

(C) ಪಂಡ

(D) ಸಿಂಹ

*ಉತ್ತರ :* ______________________________

10. ವಿಶ್ವ ಆರೋಗ್ಯ ಸಂಸ್ಥೆಯ ಮಹತ್ತರ ಸಾಧನೆಯು

(A) ಪ್ಲೇಗ್ ರೋಗ ನಿವಾರಣೆ

(B) ಮಲೇರಿಯಾ ರೋಗ ನಿವಾರಣೆ

(C) ಕಾಲರಾ ರೋಗ ನಿವಾರಣೆ

(D) ಸಿಡುಬು ರೋಗ ನಿವಾರಣೆ

*ಉತ್ತರ :* ______________________________

11. ಭಾರತವು ಇದರ ಉತ್ಪಾದನೆಯಲ್ಲಿ ಏಕಸ್ವಾಮ್ಯ ಪಡೆದಿದೆ

(A) ತಾಮ್ರ

(B) ಅಭ್ರಕ

(C) ಚಿನ್ನ

(D) ಬಾಕ್ಸೈಟ್

*ಉತ್ತರ :* ______________________________

12. ಅಮೃತಸರದಲ್ಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರು

(A) ರಾಜಸಾನ್ಸಿ

(B) ಸುಭಾಷ್ ಚಂದ್ರಬೋಸ್

(C) ಛತ್ರಪತಿ ಶಿವಾಜಿ

(D) ಇಂದಿರಾ ಗಾಂಧಿ

*ಉತ್ತರ :* ______________________________

13. ಕಲ್ಕತ್ತವು ಹೀಗೆ ಪ್ರಖ್ಯಾತವಾಗಿದೆ

(A) ಕಾಟನೋಪಪಾಲಿಸ್

(B) ಭಾರತದ ಜಾವಾ

(C) ಭಾರತದ ಚಹಾದ ಬಂದರು

(D) ಭಾರತದ ಮ್ಯಾಂಚೆಸ್ಟರ್

*ಉತ್ತರ :* ______________________________

14. ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗದ ಜೋಡಿ

(A) ಕರ್ನಾಟಕದಲ್ಲಿ ಕುಮರಿ

(B) ಅಸ್ಸಾಂನಲ್ಲಿ ಜೂಮಿಂಗ್

(C) ಮದ್ರಾಸಿನಲ್ಲಿ ಪೋಡು

(D) ಕೇರಳದಲ್ಲಿ ಪೊನಮ್

*ಉತ್ತರ :* ____________________

15. ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮವನ್ನು ಸ್ಥಾಪಿಸಿದ ಉದ್ದೇಶ

(A) ಸಂಘಟನಾತ್ಮಕ ನೆರವು ನೀಡಲು

(B) ಹಣಕಾಸಿನ ನೆರವು ನೀಡಲು

(C) ತಾಂತ್ರಿಕ ನೆರವು ನೀಡಲು

(D) ಸಂಶೋಧನೆ ಮತ್ತು ತರಬೇತಿ ನೆರವು ನೀಡಲು

*ಉತ್ತರ :* ____________________

II. 16. ಈ ಕೆಳಗೆ ಕೊಟ್ಟಿರುವ **A** ಪಟ್ಟಿಯಲ್ಲಿನ ಅಂಶಗಳನ್ನು **B** ಪಟ್ಟಿಯಲ್ಲಿನ ಅಂಶಗಳೊಡನೆ ಹೊಂದಿಸಿ ಬರೆಯಿರಿ : $5 \times 1 = 5$

| ***A* ಪಟ್ಟಿ** | | ***B* ಪಟ್ಟಿ** | |
|---|---|---|---|
| a) | ಭಾರತದ ಮೊದಲ ಬ್ರಿಟಿಷ್ ಗವರ್ನರ್ ಜನರಲ್ | i) | ಎನ್.ಎಸ್. ಹರ್ಡಿಕರ್ |
| b) | ಮೊದಲ ಕಾನೂನು ಸಲಹೆಗಾರ | ii) | ಟಿ.ಬಿ. ಕುಂಞ |
| c) | ಹಿಂದೂಸ್ತಾನ ಸೇವಾದಳ | iii) | ಟಿ.ಬಿ. ಮೆಕಾಲೆ |
| d) | ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರು | iv) | ಪುರುಷೋತ್ತಮ್ ಕಾಕೋಡ್ಕರ್ |
| e) | ಗೋವಾ ವಿಮೋಚನಾ ಚಳುವಳಿಯ ಪಿತಾಮಹ | v) | ವಾರನ್ ಹೇಸ್ಟಿಂಗ್ಸ್ |
| | | vi) | ಸಿ. ರಾಜಗೋಪಾಲಾಚಾರಿ |
| | | vii) | ಬಿ.ಆರ್. ಅಂಬೇಡ್ಕರ್ |
| | | viii) | ಡಾ || ರಾಜೇಂದ್ರಪ್ರಸಾದ್ |

*ಉತ್ತರಗಳು :* a) ____________________

b) ____________________

c) ____________________

d) ____________________

e) ____________________

III. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : $5 \times 1 = 5$

17. ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ರಚಿಸಲು ಸಲಹೆ ನೀಡಿದವರು ..........................................

18. ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದವರು ..........................................................

19. ಭಾರತ ಸರ್ಕಾರ ನೂತನ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದ ವರ್ಷ ...........................................

20. ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರದಿಂದ ಸರಕುಗಳನ್ನು ಕೊಂಡು ಬೇರೊಂದು ರಾಷ್ಟ್ರಕ್ಕೆ ಮಾರುವುದು .........

..................................................................................................................................

21. ಪಂಪಸಾಗರ ಜಲಾಶಯವನ್ನು ಈ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ ...........................................

IV. ಈ ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರ ಬರೆಯಿರಿ : $9 \times 1 = 9$

22. ಡಚ್ಚರು ಭಾರತದಲ್ಲಿ ವ್ಯಾಪಾರವನ್ನು ಏಕೆ ತ್ಯಜಿಸಿದರು ?

23. ರೈತವಾರಿ ಪದ್ಧತಿಯನ್ನು ಜಾರಿಗೆ ತಂದವರು ಯಾರು ?

24. ಯಾವ ಪತ್ರಿಕೆಗಳು ಕರ್ನಾಟಕದಲ್ಲಿ ರಾಷ್ಟ್ರೀಯತೆಯನ್ನು ವ್ಯಾಪಕವಾಗಿ ಪ್ರಚಾರ ಮಾಡಿದವು ?

25. ಇಂದು ಭಾರತವು ಎದುರಿಸುತ್ತಿರುವ ಯಾವುದಾದರೂ ಎರಡು ಸಮಾಜಘಾತಕ ಚಟುವಟಿಕೆಗಳು ಯಾವುವು ?

26. ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿಯ ಹೆಸರೇನು ?

27. ಸಾರ್ಕ್‌ನ ಎರಡನೇ ಶೃಂಗಸಭೆಯು ಎಲ್ಲಿ ನಡೆಯಿತು ?

28. ಪಕ್ಕಾರಸ್ತೆಗಳನ್ನು ಸರ್ವಕಾಲಿಕ ರಸ್ತೆಗಳೆಂದು ಏಕೆ ಕರೆಯಲಾಗಿದೆ ?

29. ಭಾರತಕ್ಕೆ ಹೊಗೆಸೊಪ್ಪನ್ನು ಪರಿಚಯಿಸಿದವರು ಯಾರು ?

30. ಯಾವಾಗಲೂ ಭಾರತದ ಯೋಜನಾ ಆಯೋಗದ ಅಧ್ಯಕ್ಷರಾಗಿರುವವರು ಯಾರು ?

V. ಈ ಕೆಳಗಿನ ಪ್ರಶ್ನೆಗಳಿಗೆ **ಎರಡು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : 16 × 2 = 32

31. ''ಚಿಕ್ಕದೇವರಾಜ ಒಡೆಯರು ಕಲೆ ಮತ್ತು ಸಾಹಿತ್ಯ ಅಭಿಮಾನಿಗಳಾಗಿದ್ದರು'' ಈ ಹೇಳಿಕೆಯನ್ನು ಸಮರ್ಥಿಸಿ.

32. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರಾಗಿ' ಅಭಿವೃದ್ಧಿ ಹೊಂದಿತು. ವಿವರಿಸಿ.

33. ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯ ನಂತರ ಭಾರತದ ಕೈಗಾರಿಕೆಗಳು ನಶಿಸಿಹೋದವು. ಇದಕ್ಕೆ ಕಾರಣಗಳು ಯಾವುವು ?

34. ಭಾರತದ ಇತಿಹಾಸದಲ್ಲಿ 19ನೆಯ ಶತಮಾನವನ್ನು ಭಾರತೀಯ ಪುನರುಜ್ಜೀವನದ ಕಾಲ ಎನ್ನಲಾಗಿದೆ. ಏಕೆ ?

35. ಜಮ್ಮು ಮತ್ತು ಕಾಶ್ಮೀರದ ಸಮಸ್ಯೆಯ ಯಾವುದಾದರೂ ನಾಲ್ಕು ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

36. ಮೊದಲನೆ ಮಹಾಯುದ್ಧದ ಕಾರಣಗಳನ್ನು ತಿಳಿಸಿ.

37. ದೇಶಾದ್ಯಂತ ಮಕ್ಕಳ ವಿಕಾಸಕ್ಕೆಂದು ಭಾರತ ಸರ್ಕಾರ ತೆರೆದಿರುವ ಸಂಸ್ಥೆಗಳಾವುವು ?

38. ಯಾವ ಅಂಗವು ವಿಶ್ವಸಂಸ್ಥೆಯ ರಕ್ಷಣಾ ಅಂಗವೆಂದು ಹೆಸರಾಗಿದೆ ? ಅದರ ಕಾರ್ಯವನ್ನು ತಿಳಿಸಿ.

39. ಎರಡನೆ ಮಹಾಯುದ್ಧದಲ್ಲಿ ಅಮೆರಿಕಾದ ಪಾತ್ರವನ್ನು ವಿವರಿಸಿ.

40. ವರ್ಣಭೇದ ನೀತಿ ಎಂದರೇನು ? ಇದು ದಕ್ಷಿಣ ಆಫ್ರಿಕಾದಲ್ಲಿ ಕೊನೆಗೊಂಡದ್ದು ಹೇಗೆ ?

41. ಉತ್ತರ ಭಾರತದ ಮೈದಾನವನ್ನು ''ಭಾರತದ ಹೃದಯ ಭಾಗ'' ಎನ್ನಲಾಗಿದೆ. ಏಕೆ ?

42. ಭಾರತದ ಯಾವುದಾದರೂ ನಾಲ್ಕು ಸ್ವಾಭಾವಿಕ ಸಸ್ಯವರ್ಗಗಳನ್ನು ಹೆಸರಿಸಿ.

43. ಭಾರತದ ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಯಾವುದಾದರೂ ನಾಲ್ಕು ಮುಖ್ಯ ಉದ್ದೇಶಗಳೇನು ?

44. ಗುಡಿ ಕೈಗಾರಿಕೆಗಳಿಗೂ ಮತ್ತು ಸಣ್ಣ ಕೈಗಾರಿಕೆಗಳಿಗೂ ಇರುವ ವ್ಯತ್ಯಾಸಗಳೇನು ?

45. ಸೌರಶಕ್ತಿಯು ಹೇಗೆ ಉಪಯುಕ್ತವಾಗಿದೆ ?

46. ಒಂದು ದೇಶದ ಆರ್ಥಿಕ ಅಭಿವೃದ್ಧಿಗೆ ಯೋಜನಾ ಆಯೋಗದ ಪಾತ್ರ ಮುಖ್ಯ. ಹೇಗೆ ?

VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

47. ಬಕ್ಸಾರ್ ಕದನಕ್ಕೆ ಕಾರಣವಾದ ಘಟನೆಗಳನ್ನು ಮತ್ತು ಅದರ ಪರಿಣಾಮಗಳನ್ನು ತಿಳಿಸಿ.

48. ಆಡಳಿತಾತ್ಮಕ ಕಾರಣಗಳು 1857 ರ ದಂಗೆಗೆ ಹೇಗೆ ಪ್ರಚೋದನೆಯಾಯಿತು ?

49. ಬಡತನ ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ವಿವರಿಸಿ.

50. ಭಾರತದ ಋತುಗಳು ವ್ಯವಸಾಯದ ಋತುಗಳಿಗಿಂತ ಬೇರೆಯಾಗಿದೆ. ಹೇಗೆ ?

51. ಕೈಗಾರಿಕೆಗಳ ಅಭಿವೃದ್ಧಿಯಿಂದ ಇಂದು ನಾವು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ?

52. ಭಾರತದ ವಿದೇಶೀ ವ್ಯಾಪಾರದ ಲಕ್ಷಣಗಳನ್ನು ತಿಳಿಸಿ.

VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ : 3 × 4 = 12

53. ಕಾನೂನು ಭಂಗ ಚಳುವಳಿ ಮತ್ತು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಗಾಂಧೀಜಿಯವರ ಪಾತ್ರವನ್ನು ವಿವರಿಸಿ.

54. ಭಾರತವು ಅಮೆರಿಕಾ ದೇಶಕ್ಕಿಂತ ರಷ್ಯಾದೊಡನೆ ಉತ್ತಮ ಸಂಬಂಧ ಹೊಂದಿದೆ. ಸಮರ್ಥಿಸಿ.

55. ನಿಯಂತ್ರಿತ ಮಾರುಕಟ್ಟೆಯ ರಚನೆ ಮತ್ತು ಕಾರ್ಯಗಳನ್ನು ವಿವರಿಸಿ.

VIII. 56. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಕೆಳಗೆ ಕೊಟ್ಟಿರುವುದನ್ನು ಗುರುತಿಸಿ : 1 + 3 = 4

a) ಕರ್ಕಾಟಕ ಸಂಕ್ರಾಂತಿ ವೃತ್ತ

b) ವಿಶಾಖಪಟ್ಟಣ

c) ಚಂಬಲ್ ಕಣಿವೆ ಯೋಜನೆ

**ಸೂಚನೆ :** ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ : ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 56ಕ್ಕೆ ಬದಲಾಗಿ)

ಕಾಡುಗಳ ಪ್ರಾಮುಖ್ಯತೆಯನ್ನು ತಿಳಿಸಿ. 4